# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ಇವರ ನಿಯಮ-72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ

**ವಿಷಯ: -**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಗಳಲ್ಲಿ ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಹಲವು ವಿಶ್ವವಿದ್ಯಾಲಯಗಳು ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳು ಹಲವು ಪರೀಕ್ಷೆಗಳನ್ನು ಎದುರಿಸುವಂತೆ ಆಗಿದೆ. ಸರ್ಕಾರ ಈ ಹಿಂದೆ ಪಿ.ಹೆಚ್.ಡಿ. ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ತರಲು ಹೊರಟಿದ್ದರೂ ಅದಿನ್ನೂ ಈಡೇರಿಲ್ಲ. ಇದರಿಂದ ನಾನಾ ಕಾರಣಗಳಿಗಾಗಿ ಅರ್ಹ ವಿದ್ಯಾರ್ಥಿಗಳು ಪಿ.ಹೆಚ್.ಡಿ ಕೋರ್ಸಿನ ಪ್ರವೇಶಾತಿಯಿಂದ ವಂಚಿತರಾಗುವ ಸಾಧ್ಯತೆ ಇದೆ.

ಆದುದರಿಂದ, ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ. ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ಇರುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

**ಉತ್ತರ : -**

ಸರ್ಕಾರದ ಆದೇಶ ಸಂಖ್ಯೆ: ಇಡಿ/584/ಯುಆರ್‌ಸಿ/2023, ದಿನಾಂಕ: 23-01-2024ರನ್ವಯ 2023-24ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ ಸಂಖ್ಯೆ: 104ರ ಅನುಷ್ಠಾನದ ಸಂಬಂಧವಾಗಿ ಸಾಧಕ-ಬಾಧಕಗಳ ಕುರಿತು ಹಾಗೂ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಬೇಕಾದ ವಿಧಿ-ವಿಧಾನಗಳ ಬಗ್ಗೆ ವಿಸ್ತೃತವಾದ ವರದಿಯನ್ನು ಹಾಗೂ ರಾಜ್ಯದ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರಿ ಅನುದಾನಿತ / ಅನುದಾನ ರಹಿತ/ ಸ್ವಾಯತ್ತ ಕಾಲೇಜು / ಸಂಸ್ಥೆಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, ಏಕರೂಪ ಪ್ರವೇಶ ಪರೀಕ್ಷೆ, ಕೌನ್ಸಲಿಂಗ್ ಹಾಗೂ ನಿಗದಿಪಡಿಸಬಹುದಾದ ಸೀಟುಗಳ ಹಂಚಿಕೆ ಮೊದಲಾದ ವಿಷಯಗಳ ಕುರಿತಂತೆ ಸಮಗ್ರ ವರದಿಯನ್ನು ನೀಡುವ ಸಲುವಾಗಿ ಒಂದು ತಜ್ಞರ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಅದರಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ. ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ತರುವ ಹಾಗೂ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳ ಪಿ.ಹೆಚ್.ಡಿ. ಸೀಟುಗಳಿಗೆ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಶೇ. 40 ಸೀಟುಗಳಿಗೆ 2024-25ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಕೌನ್ಸೆಲಿಂಗ್ ನಡೆಸುವ ಸಂಬಂಧದಲ್ಲಿ ಮಾತ್ರ ತಜ್ಞರ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ.

ಆದರೆ, ರಾಜ್ಯದ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರಿ ಅನುದಾನಿತ / ಅನುದಾನರಹಿತ/ ಸ್ವಾಯತ್ತ ಕಾಲೇಜು / ಸಂಸ್ಥೆಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, ಏಕರೂಪ ಪ್ರವೇಶ ಪರೀಕ್ಷೆ, ಕೌನ್ಸಲಿಂಗ್ ಹಾಗೂ ನಿಗದಿಪಡಿಸಬಹುದಾದ ಸೀಟುಗಳ ಹಂಚಿಕೆ ಮೊದಲಾದ ವಿಷಯಗಳ ಕುರಿತಂತೆ ವರದಿಯನ್ನು ತಜ್ಞರ ಸಮಿತಿಯು ಸಲ್ಲಿಸಿರುವುದಿಲ್ಲ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ದಿನಾಂಕ:27-03-2024ರಂದು ಹೊರಡಿಸಲಾಗಿರುವ ಸಾರ್ವಜನಿಕ ನೋಟೀಸ್‌ನಲ್ಲಿ ವಿಶ್ವವಿದ್ಯಾಲಯಗಳ ಹಂತದಲ್ಲಿ ಪ್ರತ್ಯೇಕವಾಗಿ ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿ ಪರೀಕ್ಷೆಗಳನ್ನು ನಡೆಸುವ ಬದಲಾಗಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಪಡೆದ ಅಂಕಗಳ ಆಧಾರದ ಮೇಲೆ 2024-25ನೇ ಶೈಕ್ಷಣಿಕ ಸಾಲಿನಿಂದ ಪಿ.ಹೆಚ್.ಡಿ. ಕೋರ್ಸಿಗೆ ಪ್ರವೇಶ ಮಾಡಿಕೊಳ್ಳುವ ಕಾರ್ಯನೀತಿಯನ್ನು ಯುಜಿಸಿ ಜಾರಿಗೆ ತಂದಿರುತ್ತದೆ. ಈ ಕುರಿತಂತೆ ಉಪಬಂಧಗಳನ್ನು ತಜ್ಞರ ಸಮಿತಿಯಿಂದ ರಚಿಸಲಾಗಿರುವ Karnataka State Universities Ph.D. Regulations, 2024ರ ಕರಡು ವಿನಿಯಮಗಳ ಪ್ರಕರಣ 05 ರಲ್ಲಿ

ಗೊತ್ತುಪಡಿಸಲಾಗಿರುತ್ತದೆ. ಆದರೆ, ಈ ವಿನಿಯಮಗಳಲ್ಲಿ ರಾಷ್ಟ್ರೀಯ ಅರ್ಹತಾ ಪರೀಕ್ಷೆಯ (NET) ಜೊತೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ರಾಜ್ಯಮಟ್ಟದಲ್ಲಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಇದು ಯುಜಿಸಿ ಕಾರ್ಯನೀತಿಗೆ ವ್ಯತಿರಿಕ್ತವಾಗಿದ್ದು, ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿಯಲ್ಲಿ ಏಕರೂಪತೆ ತರುವ ಉದ್ದೇಶಗಳನ್ನು ಈಡೇರಿಸಿದಂತಾಗುವುದಿಲ್ಲ.

ಆದುದರಿಂದ, ಈ ಕೆಳಕಂಡ ಅಂಶಗಳನ್ವಯ ಮರು ಪರಿಶೀಲಿಸಿ ಪುನರಾವಲೋಕಿಸುವ ಮೂಲಕ ಪರಿಷ್ಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಕೋರಲಾಗಿದೆ. ಪರಿಷ್ಕೃತ ವರದಿ ಸ್ವೀಕೃತವಾದ ತರುವಾಯ ಸಾರ್ವಜನಿಕ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಪಿ.ಹೆಚ್.ಡಿ ಸೀಟುಗಳನ್ನು ಭರ್ತಿ ಮಾಡುವ ವಿಧಾನದಲ್ಲಿ ಏಕರೂಪತೆಯನ್ನು ತರಲು ಕ್ರಮವಹಿಸಲಾಗುವುದು.

1. ರಾಜ್ಯದ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರಿ ಅನುದಾನಿತ / ಅನುದಾನರಹಿತ/ ಸ್ವಾಯತ್ತ ಕಾಲೇಜು / ಸಂಸ್ಥೆಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, ಏಕರೂಪ ಪ್ರವೇಶ ಪರೀಕ್ಷೆ, ಕೌನ್ಸಲಿಂಗ್ ಹಾಗೂ ನಿಗದಿಪಡಿಸಬಹುದಾದ ಸೀಟುಗಳ ಹಂಚಿಕೆ ಮೊದಲಾದ ವಿಷಯಗಳ ಕುರಿತಂತೆ ಸಮಗ್ರ ವರದಿಯನ್ನು ಸಲ್ಲಿಸುವ ಬಗ್ಗೆ.
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಪಿ.ಹೆಚ್.ಡಿ. ಕೋರ್ಸಿನ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಕೇವಲ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (NET) ಗಳಿಸಿದ ಅಂಕಗಳನ್ನು ಮಾತ್ರ ಪರಿಗಣಿಸುವ ಬಗ್ಗೆ ಪುನರಾವಲೋಕಿಸಿ ಅಗತ್ಯವಾದಲ್ಲಿ ಕರಡು ವಿನಿಯಮಗಳನ್ನು ಪರಿಷ್ಕರಿಸುವ ಬಗ್ಗೆ.
3. ತಜ್ಞರ ಸಮಿತಿಯಿಂದ ರಚಿಸಲಾಗಿರುವ Karnataka State Universities Ph.D. Regulations, 2024ರ ಕರಡು ವಿನಿಯಮಗಳ ವ್ಯತ್ಯಾಸಗಳ ಕುರಿತಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ಮಾಡಲಾಗಿರುವ ಅವಲೋಕನೆಗಳನ್ನು ತಜ್ಞರ ಸಮಿತಿಯೊಂದಿಗೆ ಹಂಚಿಕೊಂಡು ಸಮಿತಿಯ ಸ್ಪಷ್ಟ ಅಭಿಪ್ರಾಯದೊಂದಿಗೆ ಸದರಿ ಕರಡು ವಿನಿಯಮಗಳನ್ನು ಪರಿಷ್ಕರಿಸುವ ಬಗ್ಗೆ.

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಇಲಾಖೆ

**ಇಡಿ/680/ಯುಆರ್‌ಸಿ/2024**